# ಶ್ರೀ ಆನಂದತೀರ್ಥರು(ಶ್ರೀ ಮಧ್ವಾಚಾರ್ಯರು)

*ಪ್ರಥಮೋಹನೂಮನ್ನಾಮೋ ದ್ವಿತಿಯೋ ಭೀಮಯೇವಚ ।*
*ಪೂರ್ಣಪ್ರಜ್ಞ ತೃತೀಯಸ್ತು ಭಗವತ್ಕಾರ್ಯ ಸಾಧಕಃ ॥*

## ಮಂಗಳಚರಣ ಸಂಧಿ

ಕ್ಷಿತಿಯೊಳಗೆ ಮಣಿಮಂತ ಮೊದಲಾ । ದತಿದುರಾತ್ಮರು ಒಂದಧಿಕವಿಂ ।
ಶತಿಕುಭಾಷ್ಯವ ರಚಿಸೆ ನಡುಮನೆಯೆಂಬ ಬ್ರಾಹ್ಮಣನ ।
ಸತಿಯ ಜಠರದೊಳವತರಿಸಿ ಭಾ ।
ರತಿರಮಣ ಮಧ್ವಾಭಿದಾನದಿ । ಚತುರಲೋಕದಲಿ ಮೆರೆದಪ್ರತಿಮಗೊಂದಿಸುವೆ ॥

– ಮಂಗಳಾಚರಣ ಸಂಧಿ ೮ನೇ ಪದ್ಯ

ಪಂಚಭೇದಾತ್ಮಕ ಪ್ರಪಂಚಕೆ ಪಂಚರೂಪಾತ್ಮಕನೆ ದೈವಕ ।
ಪಂಚಮುಖಶಕ್ರಾದಿಗಳು ಕಿಂಕರರು ಶ್ರೀಹರಿಗೆ ॥
ಪಂಚವಿಂಶತಿ ತತ್ವ ತರತಮ । ಪಂಚಿಕೆಗಳನು ಪೇಳ್ದಭಾವಿ ವಿ ।
ರಂಚಿಯೆನಿಪಾನಂದ ತೀರ್ಥರ ನೆನೆವೆನನುದಿನವು ॥

– ಮಂಗಳಾಚರಣ ಸಂಧಿ ೯ನೇ ಪದ್ಯ

## ಆನಂದತೀರ್ಥರೆಂಬೊ ಅರ್ಥಿಯ ಪೆಸರುಳ್ಳ

ಆನಂದತೀರ್ಥರೆಂಬೊ ಅರ್ಥಿಯ ಪೆಸರುಳ್ಳ ಗುರುಮಧ್ವಮುನಿರಾಯ ॥ ಪ ॥
ಏನೆಂಬೆ ನಾನಿಮ್ಮ ಕರುಣಕ್ಕೆ ಎಣೆಗಾಣೆ ಗುರುಮಧ್ವಮುನಿರಾಯ ॥ ಅ ॥ ಪ ॥
ಬೇಸರದೆ ಸರ್ವರೊಳು ಶ್ವಾಸಜಪಗಳ ಮಾಡಿ ಗುರುಮಧ್ವಮುನಿರಾಯ ।
ಶ್ರೀಶಗರ್ಪಿಸುತ ನಿನ್ನ ದಾಸರನ್ನು ಸಲಹಿದಿ ಗುರುಮಧ್ವಮುನಿರಾಯ ॥ ೧ ॥
ಅಂದು ಹನುಮಂತನಾಗಿ ಬಂದು ಸುಗ್ರೀವಗೆ ಗುರುಮಧ್ವಮುನಿರಾಯ ।
ಅಂದವಾದ ಪದವಿತ್ತಾನಂದದಿಂದ ಸಲಹಿದಿ ಗುರುಮಧ್ವಮುನಿರಾಯ ॥ ೨ ॥
ಕುಂತಿಯ ಕುಮಾರನಾಗಿ ಹಂತ ಕೌರವನ ಕೊಂದಿ ಗುರುಮಧ್ವಮುನಿರಾಯ ।
ಅನಂತಪುಣ್ಯಗಳಿಸಿ ಶ್ರೀಕಾಂತನಿಗೆ ಅರ್ಪಿಸಿದಿ ಗುರುಮಧ್ವಮುನಿರಾಯ ॥ ೩ ॥
ಅದ್ವೈತರನ್ನು ಕಾದುಗೆದ್ದು ನಿನ್ನ ಭಕ್ತರಿಗೆ ಗುರುಮಧ್ವಮುನಿರಾಯ ।
ಶುದ್ಧ ತಾತ್ಪರ್ಯವಾಕ್ಯ ಪದ್ಧತಿಯ ತೋರಿಸಿದಿ ಗುರುಮಧ್ವಮುನಿರಾಯ ॥ ೪ ॥
**ಗುರುಪ್ರಾಣೇಶವಿಠಲ**ನೆ ಪರನೆಂದು ಡಂಗುರವ ಗುರುಮಧ್ವಮುನಿರಾಯ ।
ಸಾರಿಸಜ್ಜನರಿಗೆ ಹರಿಯಲೋಕ ತೋರಿಸಿದಿ ಗುರುಮಧ್ವಮುನಿರಾಯ ॥ ೫ ॥

## ಇದಿರ್ಯಾರೋ ಗುರುವೆ ಸಮರ್ಯಾರೋ

ರಾಗ – ಕಲ್ಯಾಣಿ

ಇದಿರ್ಯಾರೋ ಗುರುವೆ ಸಮರ್ಯಾರೋ ॥ ಪ ॥
ಮದನಜನಕಪ್ರಿಯ ಗುರುಮಧ್ವರಾಯ ॥ ಅ । ಪ ॥
ಸನ್ನುತಮಹಿಮ ಪ್ರಸನ್ನವದನ । ನಿನಗನ್ಯನಲ್ಲವೊ ನೀ ಎನ್ನ ರಕ್ಷಿಸಬೇಕು ॥
ನಿನ್ನ ನೋಡಿದವರು ಧನ್ಯರಾಗುವರು । ಎನ್ನದಯಾಮೂರ್ತಿ ಮನ್ನಿಸಿನೋಡೋ ॥ ೧ ॥
ದುರ್ಜನರನು ಗರ್ಜನದಿಂದೋಡಿಸಿ । ಸಜ್ಜನರನು ಸಂರಕ್ಷಿಸಿದಾತನೆ ॥
ಈ ಜಗದಲಿ ಮಧ್ಯಗೇಹರ ಪತ್ನಿಯ । ಪೂಜ್ಯ ಜಠರದಲಿ ಜನಿಸಿದ ಧೀರ ॥ ೨ ॥
ವೇದಶಾಸ್ತ್ರಗಳಿಂದ ಮಾಯ್ಗಳ ಖಂಡ್ರಿಸಿ । ಸಾಧಿಸಿ ಹರಿಯೇ ಸರ್ವೋತ್ತಮನೆಂತೆಂದು ॥
ಮೋದಭರಿತವಾದ ದಿವ್ಯಶಾಸ್ತ್ರವ ಮಾಡ್ದ । ಮೋದತೀರ್ಥ **ಪುರಂದರವಿಠಲ**ನದಾಸ ॥೩॥

## ಗುರುರಾಯರ ನಂಬಿರೊ ಮಾರುತಿಯೆಂಬೊ

ರಾಗ – ಕಾಂಬೋಧಿ

ಗುರುರಾಯರ ನಂಬಿರೊ ಮಾರುತಿಯೆಂಬೊ । ಗುರುರಾಯರ ನಂಬಿರೋ ॥ ಪ ॥
ಗುರುರಾಯರನಂಬಿ ಬಿಡದೆಯಾವಾಗಲೂ ।
ದುರಿತವಕಳೆದು ಸದ್ಗತಿಯ ಪಡೆವರೆಲ್ಲ॥ ಅ । ಪ ॥
ವನಧಿಯಮನೋವೇಗದಿ ಲಂಘಿಸಿ ಮಹಿತನುಜೆ ಶೋಕವತರಿದು ॥
ವನವಬೇರೊಡನೆ ಕಿತ್ತೀಡಾಡಿ ।
ಎದುರಾದ ದನುಜರಸದೆದು ಲಂಕೆಯ ತನ್ನ ಸಖಿಗಿತ್ತ ॥ ೧ ॥
ಕೌರವಬಕಹಿಡಿಂಬ ಕೀಚಕರೆಂಬ । ದುರುಳಸಂತತಿನೆಗ್ಗೆತ್ತಿ ॥
ಘೋರಪಾತಕಿ ದುಶ್ಶಾಸನನರಕುತವ । ಹೀರಿಮುದದಿ ಮುರವೈರಿಯ ಭಜಿಸಿದ ॥ ೨ ॥
ಜೀವೇಶರೊಂದೆಂಬುವ ದುರ್ವಾದಿಯ । ಅಭಾವ ಶಾಸ್ತ್ರಗಳೋಡಿಸಿ ॥
ಕೋವಿದರಿಗೆ ಸಧ್ಭಾಷ್ಯವ ತೋರಿದ । ದೇವ**ಪುರಂದರವಿಠಲ** ಸೇವಕರಾದಿ ॥ ೨ ॥

## ಮಧ್ವರಾಯರ ಕರುಣ ಪಡೆಯದವ

ರಾಗ – ಮೋಹನ

ಮಧ್ವರಾಯರ ಕರುಣ ಪಡೆಯದವ ಧರೆಯೊಳಗೆ ಇದ್ದರೇನು ಇಲ್ಲದಿದ್ದರೇನು ॥ ಪ ॥
ಮಧ್ವಮತವೇ ಮತವು ಸಕಲ ಶೃತಿ ಸಮ್ಮತವು । ಮಧ್ವರಾಯರ ಧ್ಯಾನ ಅಮೃತಪಾನ ॥
ಮಧ್ವರಾಯರ ಲೀಲೆ ನವರತುನದ ಮಾಲೆ ।
ಮಧ್ವರಾಯರ ಸ್ಮರಣೆ ಕುಲಕೋಟಿ ಉದ್ಧರಣೆ ॥ ೧ ॥
ಮಧ್ವರಾಯರ ಕಥಕೇಳಲು ದುರಿತಹರ । ಮಧ್ವರಾಯರ ಭಕುತಿ ಮಾಡೆ ಮುಕುತಿ ॥
ಮಧ್ವರಾಯರ ಸ್ತೋತ್ರ ಮಾಡಿದವ ಸತ್ಪಾತ್ರ ।
ಮಧ್ವರಾಯರ ಭಜನೆ ದುಷ್ಕರ್ಮ ತ್ಯಜನೆ ॥ ೨ ॥
ಮಧ್ವರಾಯರ ದಾಸನಾದವನೆ ನಿರ್ದೋಷ । ಮಧ್ವರಾಯರ ಭಂಟ ಜಗಕೆ ನೆಂಟ ॥
ಮಧ್ವರಮಣ **ವಿಜಯವಿಠ್ಠಲ**ಕಿಂಕರರಾದ । ಮಧ್ವರ ಕಾರುಣ್ಯ ಪಡೆದವನೆ ಧನ್ಯ ॥ ೩ ॥

## ಶ್ರೀ ಮಧ್ವಾಚಾರ್ಯರ ಸ್ತೋತ್ರಪದ (ಅಣಕ)

ರಚನೆ – ಶ್ರೀ ಗುರುಗೋಪಾಲವಿಠಲ ದಾಸರು
ರಾಗ – ಭೈರವಿ ಆದಿತಾಳ

ಯತಿಯು ನೀನಾದದ್ದು ಕ್ಷಿತಿಯೊಳು ನಾ ಬಲ್ಲೆ
ಪತಿತಪಾಮರಪಾವನ್ನ – ಪವಮಾನ ॥ ಪಲ್ಲವಿ ॥
ಸತಿ ನಿನ್ನ ನಡತೆಗೆ ಪ್ರತಿಕೂಲಳೆಂತೆಂಬ
ಅತಿಶಯವೇ ಕಾರಣ ಪವಮಾನ ॥ ಅ । ಪ ॥

ಹಗಲುತ್ತರಾಯಣಮಿಗೆ ಶುಕ್ಲಪಕ್ಷ ಭಾ–
ನುಗಳ ನೀನಾಶ್ರಯಿಸೆ– ಪವಮಾನ
ಸುಗಣೆ, ಕೃಷ್ಣಪಕ್ಷಗಗನೇಂದು ರಾತ್ರಿಯೊಳ್
ಪೊಗೆ– ದಕ್ಷಿಣಾಯನದಿ– ಪವಮಾನ
ವಿಗಡಹೆಂಡತಿ ಮಾರ್ಗತೆಗೆದಳು ಬೇರೆಂದು
ಒಗತನವೇತಕೆಂದು– ಪವಮಾನ
ಬಗೆಬಗೆಗಳ್ಯಾಗಿ ಚರಿಸಿ ಜಗವನೆಲ್ಲ
ದುಗುಡತನದಲಿ ಬಂದು– ಪವಮಾನ ॥ ೧ ॥

ಪತಿಗಳು ಶಯನವ ಪೃಥುಕು ಮಾದುವದೆ
ಸತಿಯರ ದಂಡವೆಂದು – ಪವಮಾನ
ಮತಿಗೆ ನೀ ತಂದು ಮಮತೆಯೊಳಂಜನೆ
ಸುತನಾಗಿ ಅವನಿಯಲಿ – ಪವಮಾನ

ಪಥದಿ ಬ್ರಹ್ಮಚರ್ಯವ್ರತದಿ ರಾಮನ ಪಾದ
ಶತಪತ್ರಗಳ ಬಿಡದೆ - ಪವಮಾನ
ನುತಿಸಿನುತಿಸಿ ದಿನ ಅತಿಶಯ ಕಳೆದರೂ
ರತಿಗೊದಗಲಿಲ್ಲೆಂದು- ಪವಮಾನ ॥ ೨ ॥

ಎಷ್ಟಾದರಾಕೆಯು ಬಿಟ್ಟುಬಾರದಲಿರೆ
ಸಿಟ್ಟಿಲಿ ಮನದೊಳಗೆ- ಪವಮಾನ
ಇಟ್ಟರಿನ್ನೊಬ್ಬಳ ಮಟ್ಟವಾಗುವಳೆಂಬ
ಗುಟ್ಟು ಥಟ್ಟನೆ ತಿಳಿದು - ಪವಮಾನ
ನಟ್ಟನೆ ಇರುಳೊಳು ನೆರೆದು ಹಿಡಂಬಿಯೊಳ್
ಪುಟ್ಟಿಸಿದೆಯೊ ಮಗನ- ಪವಮಾನ
ಇಷ್ಟಾದ ಕಾಲಕು ಘಟ್ಟಿಮನದಲಿರೆ
ಬಿಟ್ಟು ಕಡೆಯುಗದಿ - ಪವಮಾನ ॥ ೩ ॥

ಹೆಂಡತಿವಶವಿಲ್ಲ ಭಂಡಾಟಸಂಸಾರ
ಕೊಂಡೇನು ಮಾಡಲೆಂದು - ಪವಮಾನ
ಮಂಡೆಯ ಬೋಳಿಸಿ ಮಹಿಯೊಳು ಜನಿವಾರ
ಚಂಡಿಕೆಯನು ತೊರೆದು- ಪವಮಾನ
ದಂಡಕಾಷಾಯಕಮಂಡಲಧರಿಸಿ ಮ-
ತ್ತುಂಡೆಭಿಕ್ಷಾನ್ನಗಳ - ಪವಮಾನ
ಪಾಂಡಿತ್ಯದಿಂದ ಭೂಮಂಡಲಚರಿಸುತ್ತ
ಪುಂಡರ ದಂಡಿಸುತ-ಪವಮಾನ ॥ ೪ ॥

ಅನ್ನಲೇತಕೆ ಇಂಥದನ್ನಂತ ಚರ್ಯವು
ನಿನ್ನೊಳಗುಂಟು ಕೇಳೊ-ಪವಮಾನ
ಮನ್ನಿಸದಿದ್ದರೆ ಎನ್ನನು- ಈ ಬನ್ನ
ಮನ್ನೆ-ಮನೆ ದೂರವೆ - ಪವಮಾನ
ಎನ್ನೊಡೆಯ **ಗುರುಗೋಪಾಲವಿಠ-**
**ಲ**ನ್ನ ಪಾದಾಬ್ಜಗಳ-ಪವಮಾನ
ನಿನ್ನವನೆನಿಸಿ ಹೃದ್ವನಜದಲಿ ತೋರೊ
ಅನ್ಯಥನೋಡದಲೆ-ಪವಮಾನ ॥ ೫ ॥

## ಆರು ನಿನಗಿದಿರಧಿಕ

ರಾಗ – ಕಾಂಬೋಧಿ ಝಂಪೆ ತಾಳ

ಆರು ನಿನಗಿದಿರಧಿಕ ಧಾರುಣಿಯೊಳಗೆ । ಪ ।
ಸಾರಶಾಸ್ತ್ರವನೊರೆದ ಸರ್ವಜ್ಞಮುನಿರಯ ॥ ಅ । ಪ ॥
ಆರೊಂದು ವೈರಿಗಳ ತರಿದು ವೈಷ್ಣವರಿಗೆ । ಆರೆರಡು ಊರ್ಧ್ವಪುಂಡ್ರಗಳನಿಡಿಸಿ ।
ಆರು ಮೂರರಮೇಲೆ ಮೂರಧಿಕಕುಮತಗಳ । ಬೇರೊರಸೆ ಕಿತ್ತೊಮ್ಮೆ ಬಿಸುಟಂಥ ಧೀರ ॥೧॥
ಆರುನಾಲ್ಕು ತತ್ತ್ವದಭಿಮಾನಿಗಳಿಗೊಡೆಯ । ಮಾರುತನ ಮೂರನೆಯ ಅವತಾರನೆ ।
ಆರೈದು ಮೇಲೆರಡು ಅಧಿಕಲಕ್ಷಣವುಳ್ಳ । ಮೂರುತಿಯಳೊಪ್ಪುತಿಹ ಮುನಿವರೇಣ್ಯ ॥ ೨ ॥
ಆರಾರು ಮೇಲೊಂದು ಅಧಿಕಲೆಕ್ಕದಗ್ರಂಥ । ಸಾರವನು ರಚಿಸಿ ಸಜ್ಜನರಿಗಿತ್ತು ।
ಪಾರಾಮಾರ್ಥಿಕಭೇದ ಪಂಚಕವ ಸ್ಥಾಪಿಸಿದೆ । ಧೀರ **ಶ್ರೀಕೃಷ್ಣ**ನ ದಾಸರೊಳು ಧೊರೆಯೆ ॥೩॥

## ಹನುಮ ಭೀಮ ಮಧ್ವ ಮುನಿಯಾ

ರಾಗ – ಭೀಮಪಲಾಸ್ ರೂಪಕ ತಾಳ

ಹನುಮ ಭೀಮ ಮಧ್ವ ಮುನಿಯಾ ನೆನೆದು ಬದುಕಿರೊ । ಪ ।
ಅನುಮಾನಗಳಿಲ್ಲದಲೆ ಮನೋಭೀಷ್ಟಗಳ ಕೊಡುವ ॥ ಅ । ಪ ॥
ಪ್ರಾಣಿಗಳ ಪ್ರಾಣಾಧಾರ ಪ್ರಾಣಿಗಳಲೆ ಉತ್ತಮನು ।
ಪ್ರಾಣಾಪಾನ ವ್ಯಾನೋದಾನ ಸಮಾನರಲ್ಲಿ ಉತ್ತಮನು ।
ಕಾಣಿರೇನು ಕಾಯ ಕರ್ಮ ಚಕ್ಷು ಇಂದ್ರಿಯಗಳಿಗೆಲ್ಲ ।
ತ್ರಾಣಕೊಟ್ಟು ಸಲಹುವ ಜಾಣ ಗುರು ಮುಖ್ಯಪ್ರಾಣ ॥ ೧ ॥

ಕಾಮಧೇನು ಚಿಂತಾಮಣಿ ಕಲ್ಪವೃಕ್ಷನಾದ ಸ್ವಾಮಿ ।
ಪ್ರೇಮದಿಂದ ನೆನೆಯುವರ ಭಾಗ್ಯಕೆ ಎಣೆಯುಂಟೆ ।
ಸಾಮಾನ್ಯನಲ್ಲ ಮೋಕ್ಷಾದಿ ಸಂಪದ್ದಾತ ।
ಆ ಮಹಾಪರೋಕ್ಷ ಜ್ಞಾನ ದಾರಢ್ಯ ಭಕುತಿ ಕೊಡುವ ॥ ೨ ॥

ಅವತಾರ ತ್ರಯಂಗಳಿಂದ ಶ್ರೀಹರಿಯ ಸೇವಿಪನು ।
ತವಕದಿಂದ ಪೂಜಿಪ ಮಹಾಮಹಿಮೆಯುಳ್ಳವನು ।
ಕವಿತೆ ವಾಕ್ಯವಲ್ಲವಿದು ಸುವಿವೇಕದಿ ಕೇಳುವುದು ।
ಭವಬಂಧನ ಕಳೆದು ಕಾವ **ಪುರಂದರವಿಠ್ಠಲ**ನ ದಾಸ ॥ ೩ ॥

## ಹನುಮ ನಮ್ಮ ತಾಯಿತಂದೆ

ರಾಗ – ಮೋಹನ ಅಟತಾಳ

ಹನುಮ ನಮ್ಮ ತಾಯಿತಂದೆ ಭೀಮ ನಮ್ಮ ಬಂಧು ಬಳಗ ।
ಆನಂದತೀರ್ಥರೆ ನಮಗೆ ಗತಿಗೋತ್ರವಯ್ಯ ॥ ಪ ॥
ತಾಯಿತಂದೆ ಹಸುಳೆಗಾಗಿ ಸಹಾಯ ಮಾಡಿ ಸಾಕುವಂತೆ ।
ಆಯಾಸವಿಲ್ಲದೆ ಸಂಜೀವನವ ತಂದೆ ।
ಗಾಯಗೊಂಡ ಕಪಿಗಳನ್ನು ಸಾಯದಂತೆ ಪೊರೆದ ರಘು
ರಾಮನಂಘ್ರಿಗಳೇ ಸಾಕ್ಷಿ ತ್ರೇತಾಯುಗದೇ ॥ ೧ ॥
ಬಂಧುಬಳಗದಂತೆ ಆಪದ್ಬಾಂದವನಾಗಿ ಪಾರ್ಥನಿಗೆ ।
ಬಂದ ದುರಿತಗಳ ಪರಿಹರಿಸಿ ।
ಅಂಧಕಜಾತರ ಕೊಂದು ನಂದಕಂದಾರ್ಪಣೆಂದ ಗೋ।
ವಿಂದನಂಘ್ರಿಗಳೇ ಸಾಕ್ಷಿ ದ್ವಾಪರಯುಗದೇ ॥ ೨ ॥
ಗತಿಗೋತ್ರರಂತೆ ಸಾಧುತತಿಗಳಿಗೆ ಮತಿಯ ತೋರಿ ।
ಮತಿಗೆಟ್ಟ ಇಪ್ಪತ್ತೊಂದು ಮತವ ಖಂಡಿಸಿ ।
ಗತಿಗೆಟ್ಟ ಸದ್ವೈಷ್ಣವರಿಗೆ ಸದ್ಗತಿ ತೋರಿದೆ ಪರಮಾತ್ಮ ।
ಗತಿಗುರು **ಪುರಂದರವಿಠ್ಠಲ**ನೆ ಸಾಕ್ಷಿ ಕಲಿಯುಗದಲ್ಲಿ ॥ ೩ ॥

## ಒಂದು ಬಾರಿ ಸ್ಮರಣೆ ಸಾಲದೆ

ರಾಗ – ಪಂತುವರಾಳಿ ರೂಪಕತಾಳ

ಒಂದು ಬಾರಿ ಸ್ಮರಣೆ ಸಾಲದೆ ಆ । ಪ ।
ನಂದತೀರ್ಥರ ಪೂರ್ಣಪ್ರಜ್ಞರ ಸರ್ವಜ್ಞರಾಯರ ಮಧ್ವರಾಯರ । ಅ । ಪ ।
ಹಿಂದನೇಕ ಜನ್ಮಗಳಲ್ಲಿ ನೊಂದು ಯೋನಿಗಳಲಿ ಬಂದು ।
ಇಂದಿರೇಶ ಹರಿಯ ಪಾದವ ಹೊಂದಬೇಕೆಂಬುವರಿಗೆ ॥ ೧ ॥
ಪ್ರಕೃತಿಬಂಧದಲ್ಲಿ ಸಿಲುಕಿ ಸಕಲ ವಿಷಯಗಳಲಿ ನೊಂದು ।
ಅಕಳಂಕಚರಿತ ಹರಿಯ ಪಾದಭಕುತಿ ಬೇಕೆಂಬುವರಿಗೆ ॥ ೨ ॥
ಆರುಮಂದಿ ವೈರಿಗಳನು ಸೇರಿಸಲೀಸದಂತೆ ಜರಿದು ।
ಧೀರನಾಗಿ ಹರಿಯ ಪಾದವ ಸೇರಬೇಕೆಂಬುವರಿಗೆ ॥ ೩ ॥
ಘೋರ ಸಂಸಾರಾಂಬುಧಿಗೆ ಪರಮಜ್ಞಾನವೆಂಬ ವಾಡೆ ।
ಏರಿ ಮೆಲ್ಲನೆ ಹರಿಯಪಾದ ಸೇರಬೇಕೆಂಬುವರಿಗೆ ॥ ೪ ॥
ಹೀನಬುದ್ಧಿಯಿಂದ **ಶ್ರೀಹಯವದನ**ನ್ನ ಜರಿದು ।
ತಾನು ಬದುಕಲರಿಯದಿರಲು ತೋರಿ ಕೊಟ್ಟ ಮಧ್ವಮುನಿಯು ॥ ೫ ॥

## ಆದರಿಸೋ ಆದರಿಸೋ ಆಗಮಪ್ರತಿಪಾದ್ಯ

ರಾಗ – ಕಲ್ಯಾಣಿ ಝಂಪೆ ತಾಳ

ಆದರಿಸೋ ಆದರಿಸೋ ಆಗಮಪ್ರತಿಪಾದ್ಯ ।
ಮೋದತೀರ್ಥಪೂರ್ಣಬೋಧಾಚಾರ್ಯ ॥ ಪ ॥
ಮುನಿಕುಲೋತ್ತಮ ಶಿರೋರತುನ ಕಾಂಚನವರ್ಣ ।
ಘನಜ್ಞಾನ ಪರಿಪೂರ್ಣ ಶುಭಗುಣಾರ್ಣ ।
ಅನಿಮಿಷರ ಗುರುವೆ ಅನಿಮಿತ್ತಬಂಧೂ ದಯಾಸಿಂಧೂ ।
ಸನಕಾದಿವಂದ್ಯನೆ ಸರ್ವಜ್ಞರಾಯ ॥ ೧ ॥
ಶಕುತವ್ಯಕುತಾವ್ಯಾಪ್ತಾ ಭಕುತಜನಕೆ ಆಪ್ತಾ ।
ಭಕುತಿನಿಧಿ ಎಂಬೋ ಬಹುಭಾಗ್ಯಭರಿತಾ ।
ಭಕುತಿರಹಿತ ನಾನಲ್ಲ ಭಕುತಕಾಮಧೇನು ।
ಶುಕುತ ಶೋಣಿತರಹಿತ ಸುಖತೀರ್ಥರಾಯ ॥ ೨ ॥
ನಂಬಿದವರಿಗೆ ಮಿತ್ರ ಡಂಭಜನರಿಗೆ ಶತ್ರು ।
ಹಂಬಲಿಸೋ ಜನಕೆ ಹರುಷಾಂಬುಧಿಯು ।
ಬಿಂಬಿಮೂರುತಿ **ಗೋಪಾಲವಿಠ್ಠಲ**ನ ಪಾ– ।
ದಾಂಬುಜಕೆ ಅನುದಿನ ತುಂಬೆ ನಾ ಕಾಂಬೆ ॥ ೩ ॥

## ನಂದತೀರ್ಥರಾ ನಂದದಿ

ರಾಗ – ದೇವಗಾಂಧಾರ ರೂಪಕ ತಾಳ

ನಂದತೀರ್ಥರಾನಂದದಿ ಭಜಿಸಿರೋ ।
ಬಂದು ಸಲಹಬೇಕೆಂದು ಬೇಡುತಾ ॥ ಅ । ಪ ॥
ಶ್ರದ್ಧಾರಮಣನು ಮಧ್ಯಗೇಹನ । ಶುದ್ಧ ಕುಲದೋಳು ಉದ್ಭವಿಸಿದ ॥ ೧ ॥
ಗೋಪ್ರದಾಯಕ ವಿಪ್ರವರ್ಯಗೆ । ಕ್ಷಿಪ್ರದಲ್ಲಿ ಸುಪ್ರಜ್ಞೆಯಿತ್ತು ಆನಂದತೀರ್ಥರ ॥ ೨ ॥
ದೂಷ್ಯವಾದ ದುರ್ಭಾಷ್ಯ ಖಂಡಿಸಿ । ಶಿಷ್ಯರಿಗೆ ಸದ್ಭಾಷ್ಯ ಪೇಳಿದ ॥ ೩ ॥
ಅಚ್ಯುತಪ್ರೇಕ್ಷರ ತುಚ್ಛಮತದೊಳು । ಇಚ್ಛೆ ತಪ್ಪಿಸಿ ಸ್ವಚ್ಛರೆನಿಸಿದ ॥ ೪ ॥
ಯವನನೃಪತಿಯ ಭವನಕೆ ಪೋಗಿ । ಅವನ ಅರ್ಧರಾಜ್ಯವನೆ ತಂದ ಆನಂದತೀರ್ಥರ ॥ ೫ ॥
ದೇವಗಂಗೆಯು ಪವನಾಂಶನ । ಸೇವೆಮಾಡಿ ತಾ ಪಾವನಳಾದ ಆನಂದತೀರ್ಥರ ॥ ೬ ॥
**ನಾಮಗಿರಿ**ಯ ಸಿರಿಸ್ವಾಮಿ ನೃಹರಿಯ । ಪ್ರೇಮಬಲದಿ ನಿಸ್ಸೀಮರಾದ ಆನಂದತೀರ್ಥರ ॥ ೭ ॥

## <u>ಯತಿವರೇಣ್ಯರ ಮನುಜ</u>

ರಾಗ – ತೋಡಿ ರೂಪಕ ತಾಳ

ಯತಿವರೇಣ್ಯರ ಮನುಜ – ಸತತ ಭಜಿಸೆಲೋ ॥ ಪ ॥
ಸತತ ವಿಮಲಚರಿತ ಸತ್ಯವತಿಯ ಸುತರ ಮತವನರಿತ ॥ ಅ । ಪ ॥
ಆಜಜನಕನ ಮಹಿಮೆ ಮರೆತು । ಸುಜನರೆಲ್ಲ ಬಳಲುತಲಿರೆ ॥
ಭುಜಗಶಯನನಾಜ್ಞೆಯಿಂದ । ರಜತಪುರದೊಳವತರಿಸಿದ ॥ ೧ ॥
ಭೂಸುರವರಕುಲದಿ ಜನಿಸಿ । ವಾಸುದೇವನಾಮದಿಂದ ॥
ಶೈಶವವನು ಕಳೆದು ತುರಿಯ । ಆಶ್ರಮವನ್ನು ಸ್ವೀಕರಿಸಿದ ॥ ೨ ॥
ಜೀರ್ಣವಾದ ನಿಗಮಾರ್ಥಗಳ । ನಿರ್ಣಯಿಸಿದ ಜ್ಞಾನಾನಂದ ।
ಪೂರ್ಣವ್ಯಾಸರೋಳ್ ಶ್ರವಣಮಾಡಿ । ಪೂರ್ಣಪ್ರಜ್ಞರಾಗಿ ಮೆರೆದ ॥ ೩ ॥
ಹರಿಯು ಜೀವರು ಸಮರು ಎಂದು । ನರಿಯುಕುತಿಗಳಿಂದ ಬೋಧಿಪ ।
ದುರುಳವಾದಗಳನು ಮುರಿದು । ಹರಿ ಸರ್ವೋತ್ತಮನೆಂದರುಹಿದ ॥ ೪ ॥
ಶುಕ್ತಿರಜತಾಜ್ಞನದಂತೆ । ವಿಶ್ವವೆಲ್ಲ ಮಿಥ್ಯಾವೆಂಬೊ ।
ಯುಕ್ತಿಗಳನೆ ಖಂಡಿಸಿ ಜಗತ್ । ಸತ್ಯವೆಂದು ದೃಢದಿ ತೋರಿದ ॥ ೫ ॥
ಬ್ರಹ್ಮನು ಗುಣಶೂನ್ಯನೆಂದು । ದುರ್ಮತಗಳ ಹರಡುವವರ ।
ಹಮ್ಮು ಮುರಿದು ಜಗದಿ ಶಾಸ್ತ್ರ । ಮರ್ಮಗಳನು ವಿವರಿಸಿದ ॥ ೬ ॥
ದೂಷ್ಯವಾದ ಇಪ್ಪತ್ತೊಂದು । ಭಾಷ್ಯಗಳನು ಮುರಿದು ಶುದ್ಧ ।
ಭಾಷ್ಯಗಳನು ರಚಿಸಿ ತಮ್ಮ । ಶಿಷ್ಯವರ್ಗಕೆ ಸಾರಪೇಳಿದ ॥ ೭ ॥
ಶ್ರವಣ ಮನನ ಧ್ಯಾನಗಳಿಂದ । ಸಿರಿರಮಣ ಜ್ಞಾನಪೊಂದಿ ।
ವರಕರುಣವ ಪಡೆಯುವುದೇ । ನಿರುತಸುಖಕೆ ಪಥವೆಂದರುಹಿದ ॥ ೮ ॥
ಹನುಮಭೀಮಮಧ್ವರೂಪದಿ । ರಾಮಕೃಷ್ಣ ವೇದವ್ಯಾಸರ ।
ನಿರತ ಸೇವೆಮಾಡಿ ಶ್ರೀಹರಿ । ಯೊಲಿಮೆಯಿಂ **ಪ್ರಸನ್ನ**ರಾದ ॥ ೯ ॥

## ನಂದತೀರಥರಾಯ ಅಸ್ಮದ್ಗುರೋರ್ಗುರು

ರಾಗ – ಮಧ್ಯಮಾವತಿ ಆದಿತಾಳ

ನಂದತೀರಥರಾಯ–ಅಸ್ಮದ್ಗುರೋರ್ಗುರು ।
ನಂದು ಸುಖಮಯಕಾಯಾ–ಪೊರೆಯಯ್ಯ ಜೀಯ್ಯಾ ॥ ಪ ॥

ನಂದನಂದನ ಪಾದಕಮಲಕೆ । ನಂದ ಮಧುಕರನಂದದಲಿ ನಿಜ ।
ಮಂದಜನರಿಗೆ ನಂದ ಕೊಡುವಾ । ನಂದಮೂರುತಿ ಆನಂದಕಾರಿಯೆ ॥ ಅ । ಪ ॥

ಮಧ್ಯಮುನಿ ದ್ವಿಜನಲ್ಲಿ–ಉದ್ಭವಿಸಿ ನೀನೂ । ಮಧ್ವಮುನಿ ಪೆಸರಲ್ಲಿ – ದುರ್ವಾದಿಗಳ ಅ– ।
ಶುದ್ಧ ಭಾಷ್ಯಗಳಲ್ಲೀ–ಜಯಪಡೆದ ನಿನ್ನ । ಶುದ್ಧ ಭಾಷ್ಯಗಳಲ್ಲಿ–ಭಕ್ತಿಯಿಂದಲ್ಲೀ ।
ಶುದ್ಧಹರಿಮತದ ಶುಭ । ಸಿದ್ಧಾಂತ ಸ್ಥಾಪಿಸಿ ಜಗದಿ ಜೀವರ ।
ಸಿದ್ಧಗಣಕಧಿನಾಥನೆಂದೂ ಪ್ರ । ಸಿದ್ಧಗೈಸಿದ ಶುದ್ಧಮೂರುತಿ ॥ ೧ ॥

ಬದರಿಕಾಶ್ರಮವನ್ನೂ–ಐದಿದ್ಯೋ ಮುದದಿ । ಪದುಮನಾಭನನ್ನೂ–ಜಲಗೈಸಿ ನಿನ್ನ ।
ಬದಿಗ ಜನರಿಗಿನ್ನೂ–ಸುವಾಕ್ಯ । ದಿಂದಲಿ ಪೇಳಿದದು ನಿಜವಿನ್ನೂ ।
ಪದುಮನಾಭನೆ ಪರಮದೈವನು । ಪದುಮೆ ಮೊದಲು ಬ್ರಾಹ್ಮಂತಜೀವರ ।
ಪದದಿ ಗುಣದ ತಾರತಮ್ಯವ । ಹೃದಯಮಂದಿರದಲ್ಲಿ ಪೇಳಿದ ॥ ೨ ॥

ಘನ್ನ ಮಹಿಮನೆ ಎನ್ನಾ – ಮನವಚನ ಕಾಯದಿ । ಇನ್ನು ಮಾಡುವುದನ್ನಾ–ಸ್ವೀಕರಿಸಿ ಹರಿಗೆ ।
ಮುನ್ನ ನೀಡೆಲೋ ಚೆನ್ನಾ–ವಾಗಿ ನಿಜಫಲ । ನಿನ್ನ ಜನರಿಗಿನ್ನಾ–ನೀಡಯ್ಯ ಮುನ್ನ ।
ನಿನ್ನ ಒಳಗೆ ನಿರುತ ಇರುವ । ಘನ್ನ **ಗುರುಜಗನ್ನಾಥವಿಠ್ಠಲ**ನ ।
ಎನ್ನಮನದಲಿ ತೋರಿಸೆಂದು । ನಿನ್ನ ಪದಯುಗವನ್ನು ಭಜಿಸಿದೆ ॥ ೩ ॥

ಜನುಮ ಜನುಮದಲಿ ಎನಗಿರಲಿ

ರಾಗ – ಷಣ್ಮುಗಪ್ರಿಯ ತಾಳ : ಆದಿತಾಳ

ಜನುಮ ಜನುಮದಲಿ ಎನಗಿರಲಿ ॥ ಪ ॥
ಹನುಮ ಭೀಮ ಮಧ್ವಮುನಿಗಳ ಸೇವೆಯು ॥ ಅ.ಪ ॥
ಮತರಿಶ್ವ ನೀ ಪ್ರೀತನಾಗೆ ಅಜ
ತಾತನು ಒಲಿವನು ಸುಲಭದಲಿ
ಕೋತಿಯರೂಪದಿ ಭೂತಳದಲಿ ಬಲು
ಖ್ಯಾತಿ ಪಡೆದ ರಾಮದೂತರ ಸೇವೆಯು ॥ ೧ ॥
ಹರನಭಕುತ ಜರಾಸಂಧನಕಾಯವ
ಹರಿದು ಮುರಿದು ಬಲು ಸುಲಭದಲಿ

ಹರಿಗಪರೋಕ್ಷದಿ ಅರ್ಪಣೆಮಾಡಿದ
ಕುರುಕುಲಪತಿ ಬಲ ಭೀಮರ ಸೇವೆಯು ॥ ೨ ॥

ಶುದ್ಧ ದ್ವಜಕುಲದಲಿ ಉದ್ಭವಿಸುತ-ಅನಿ
ರುದ್ಧನಿಗನುಮತವಾಗಿರವ
ಸಿದ್ಧಾಂತದ ಪದ್ಧತಿಯನು ತೋರಿದ
ಮಧ್ವಮತದ ತತ್ವದಲಿ ಪ್ರಸನ್ನತೆ ॥ ೨ ॥

॥ಶ್ರೀಮಧ್ವೇಶಾರ್ಪಣಮಸ್ತು॥

ಸಂಗ್ರಹಣೆ
ಹರೀಶ ಕೆಂಪದಾಳಿಹಳ್ಳಿ
ಬೆಂಗಳೂರು.